

# ಗೋಲ್ಡನ್ ಷವರ್!

■ ಚಿತ್ರ–ಬರಹ:
**ಸ್ನೇಹಾಲಿ ಗಾಂವ್ಕರ್**



ಬ್ರೆಜಿಲ್‌ನಿಂದ ಫುಟ್‌ಬಾಲ್ ಹುಚ್ಚು ಮಾತ್ರ ಬಂದಿರುವುದಲ್ಲ; ಈ ಗೋಲ್ಡನ್ ಷವರ್ ಕೂಡಾ ಬಂದಿದೆ!

ಮನೆಯ ಮುಂದೆ ತಳಿರು ತೋರಣದಂತೆ ಹಬ್ಬುವ ಈ ಬಳ್ಳಿಯು ಮನಕ್ಕೆ ಮುದ ನೀಡುತ್ತದೆ. ಬಳ್ಳಿಗೆ ಬೆಂಕಿ ಹಚ್ಚಿದಂತೆ ತೋರುವ ಹೂವುಗಳು ಈ ಬಳ್ಳಿಗೆ 'ಫ್ಲೇಮ್ ವೈನ್' ಎಂಬ ಹೆಸರನ್ನೂ ತಂದುಕೊಟ್ಟಿವೆ. ನೋಡುವವರಂತೂ ಈ ಬೆಂಕಿಬಳ್ಳಿಯನ್ನು ಕಂಡು 'ಆಹಾ! ಎಷ್ಟು ಸುಂದರ!' ಎಂಬ ಉದ್ಗಾರವನ್ನು ತಡೆಯುವುದು ಕಷ್ಟ.

'ಬಿಗ್ನೊನೇಸಿ' ಕುಟುಂಬಕ್ಕೆ ಸೇರಿದ ಈ ಲತೆಯ ತವರುಮನೆ ಬ್ರೆಜಿಲ್ ಮತ್ತು ಪೆರುಗ್ವೆ. ಹತ್ತು ಮೀಟರ್–ವರೆಗೂ ಹಬ್ಬುವ ಈ ಬಳ್ಳಿಯಲ್ಲಿ ಅರಳುವ ಹೂಗುಚ್ಛಗಳು ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಬ್ರೆಜಿಲ್‌ನಲ್ಲಿ ಈ ಸಸ್ಯವನ್ನು ಬಲಸಂವರ್ಧನೆಗಾಗಿ ನೀಡುವುದು ಹಳೆಯ ಸಂಪ್ರದಾಯ. ಈ ಸಸ್ಯದ ಸಾರ–ವನ್ನು ಸ್ಥೂಲಕಾಯ ನಿಯಂತ್ರಣಕ್ಕೆ ಹಾಗೂ ಜೀರ್ಣಶಕ್ತಿಯ ಏರುಪೇರಿನಿಂದಾದ ರೋಗಗಳಲ್ಲಿ (Metabolic dysfunction) ಬಳಸುತ್ತಾರೆ. ಈ ಮಾಹಿತಿಯ ಬೆನ್ನು ಹತ್ತಿ ಸಂಶೋಧನೆ ನಡೆಸಿದ ಸಂಶೋಧಕರು ಹಲವು ಹೊಸ ಸಂಗತಿಗಳನ್ನು ಕಂಡುಹಿಡಿದಿದ್ದಾರೆ.

ಈ ಹೂವಿನಲ್ಲಿರುವ 'ಹೈಡ್ರೊಇಥೆನೊಲಿಕ್' ಎಂಬ ರಾಸಾಯನಿಕ ಗುಣವು ಹೆಚ್ಚಿನ ರಿಫೈನ್ಡ್ ಕಾರ್ಬೊ–ಹೈಡ್ರೇಟ್ ಆಹಾರದಿಂದ ಉಂಟಾಗುವ ಊತ (Inflammation) ಹಾಗೂ ಜೀರ್ಣಶಕ್ತಿಯ ಏರುಪೇರನ್ನು (Metabolic dysfunction) ಸರಿಪಡಿಸುತ್ತದೆ ಎನ್ನುವುದು ಗೊತ್ತಾಗಿದೆ. ಅದೂ ಅಲ್ಲದೆ ಇದರ ಬೇರಿಗೆ 'ಆ್ಯಂಟಿಆಕ್ಸಿಡೆಂಟ್' (artioxidant) ಗುಣ ಇದೆ ಎಂದೂ ಸಂಶೋಧಕರು ಬೊಟ್ಟು ಮಾಡಿದ್ದಾರೆ.

ಇಷ್ಟೆಲ್ಲ ಗುಣ ಮತ್ತು ಸೌಂದರ್ಯ ಹೊಂದಿರುವ ಈ ಬಳ್ಳಿ ಮನೆಯ ಮುಂದೆ ಸಿಂಗಾರಕ್ಕೆ ಹೇಳಿ ಮಾಡಿಸಿದಂತಿದೆ. ಮನಸ್ಸು ಮಾಡಿದರೆ ನಮ್ಮಲ್ಲೂ ಬೆಳೆಯಬಹುದು.